**ಮೈಸೂರಿನಲ್ಲಿರುವ ಅಂಧರ ಕೈಗಾರಿಕಾ ತರಬೇತಿ ಕೇಂದ್ರಕ್ಕೆ ರಾಜ್ಯಸರ್ಕಾರದ ಸಹಾಯ**

342 - ಶ್ರೀ ಅಯನೂರು ಮಂಜುನಾಥ್ (ಹೊಸನಗರ), ಶ್ರೀ ಬಿ. ಮುನಿಯಪ್ಪ (ಗಾಂಧಿ ನಗರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಮೈಸೂರಿನಲ್ಲಿರುವ ಅಂಧರ ಕೈಗಾರಿಕಾ ತರಬೇತಿ ಕೇಂದ್ರಕ್ಕೆ ರಾಜ್ಯ ಸರ್ಕಾರ ಶೇಕಡ ನೂರಕ್ಕೆ ನೂರರಷ್ಟು ಧನ ಸಹಾಯ ನೀಡುತ್ತಿರುವುದು ನಿಜವಲ್ಲವೇ?*

*ಆ) ಹಾಲಿ ಸದರಿ ಕೇಂದ್ರದ ಆಡಳಿತವನ್ನು ಖಾಸಗಿಯವರಿಗೆ ವಹಿಸಿರುವುದು ನಿಜವೇ? ಹಾಗಿದ್ದಲ್ಲಿ ಆ ಸಂಸ್ಥೆಯ ಹೆಸರೇನು?*

*ಇ) ಇತ್ತೀಚೆಗೆ ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೈಸೂರು ಇವರು ಮೇಲ್ಕಂಡ ಸಂಸ್ಥೆಗೆ ಭೇಟಿ ನೀಡಿ ವರದಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಈ) ಸದರಿ ಸಂಸ್ಥೆಯನ್ನು ಸಿಬ್ಬಂದಿ ಸಮೇತ ಸರ್ಕಾರವು ತನ್ನ ವಶಕ್ಕೆ ತೆಗೆದುಕೊಂಡು ಮೈಸೂರಿನಲ್ಲಿರುವ ಸರ್ಕಾರಿ ಅಂಧ ಮಕ್ಕಳ ಶಾಲೆ ಹಾಗೂ ಸರ್ಕಾರಿ ಕಿವುಡ ಮಕ್ಕಳ ಶಾಲೆ ಇವುಗಳಲ್ಲಿ ವೀಲಿನಗೊಳಿಸಬೇಕೆಂದು ಸದರಿ ಅಧಿಕಾರಿ ಸೂಚಿಸಿರುವುದು ನಿಜವೇ?*

*ಉ) ಹಾಗಿದ್ದಲ್ಲಿ ಈ ಸಂಸ್ಥೆಯನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳಲು ಉದ್ದೇಶಿಸಿದೆಯೇ?*

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಹೌದು

ಆ) ಹೌದು, ಈ ಕೇಂದ್ರದ ಆಡಳಿತವನ್ನು ಸ್ಥಾಪಿಸಿದ ದಿನದಿಂದ ಖಾಸಗಿ ಸ್ವಯಂ ಸೇವಾ ಸಂಸ್ಥೆಯಾದ ರಾಷ್ಟ್ರೀಯ ಅಂಧರ ಸಂಸ್ಥೆ ಕರ್ನಾಟಕ ಶಾಖೆ, ಬೆಂಗಳೂರು ಇವರಿಗೆ ವಹಿಸಿದ್ದು 1995-96ನೇ ಸಾಲಿನಲ್ಲೂ ಮುಂದುವರೆದಿದೆ.

ಇ) ಹೌದು.

ಈ) ಹೌದು.

ಉ) ಇಲ್ಲ.

ಶ್ರೀ ಅಯನೂರು ಮಂಜುನಾಥ : ಮಹಿಳಾ ಮತ್ತು ಮಕ್ಕಳ ಖಾತೆ ಸಚಿವರು ಕಲ್ಯಾಣ ಎನ್ನತಕ್ಕ ಪದವನ್ನೂ ಸೇರಿಸಿಕೊಂಡಿದ್ದಾರೆ. ನಾನು ಅಂಧರ ಶಾಲೆಯ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿ ವರದಿ ಬಂದಿದೆಯೇ ಎಂದಿರುವುದಕ್ಕೆ ಹೌದು ಎಂದು ಹೇಳಿದ್ದೀರಿ. ಹಾಗಾದರೆ ಈ ಸಂಸ್ಥೆಯನ್ನು ಸರ್ಕಾರದ

ವಶಕ್ಕೆ ತೆಗೆದುಕೊಳ್ಳುತ್ತೀರಾ ಎಂದರೆ ಇಲ್ಲ ಎಂದು ಹೇಳಿದ್ದೀರಿ. ಒಂದು ಸಮಿತಿ ಅಲ್ಲಿಗೆ ಹೋಗಿ ಭೇಟಿ ನೀಡಿ ಒಂದು ಸ್ಪಷ್ಟ ವರದಿಯನ್ನು ನೀಡಿದಮೇಲೆ ಅಲ್ಲಿ ಅಂಧಮಕ್ಕಳಿಗೆ ಆಗುತ್ತಿರುವ ತೊಂದರೆಯನ್ನು ಗಮನಿಸಿ ಸರ್ಕಾರ ಶೇಕಡ ನೂರು ಅನುದಾನವನ್ನು ಕೊಡುತ್ತಿರುವುದರಿಂದ ಈ ಸಂಸ್ಥೆಯನ್ನು ಸರ್ಕಾರ ಏತಕ್ಕೆ ತನ್ನ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ?

ಎರಡನೆಯದಾಗಿ ರಾಷ್ಟ್ರೀಯ ಅಂಧರ ಸಂಸ್ಥೆಯನ್ನು ಖಾಸಗಿಯವರು ಏನು ನಡೆಸುತ್ತಿದ್ದಾರೆ ಅವರು ತಮಗೆ ಬೇಡ ಬೇಡ ಎಂದರೂ ಕೂಡ ಬಲವಂತವಾಗಿ ಮಾಫ಼ಸ್ಥಾನ ಮಾಡಿಸಿ ಅವರಿಗೆ ಏತಕ್ಕೆ ಕಟ್ಟುತ್ತಿದ್ದೀರಿ?

ಮೂರನೆಯದಾಗಿ, ಈ ಸಂಸ್ಥೆಯನ್ನು ಅವರೇ ನಡೆಸಬೇಕೆಂದು ಹೇಳುತ್ತಿರುವುದರಲ್ಲಿ ತಮ್ಮ ಹಿತಾಸಕ್ತಿ ಏನು? ಈ ಮೂರು ವಿಷಯಗಳಿಗೆ ಸ್ಪಷ್ಟ ಉತ್ತರ ಕೊಡಬೇಕು. ಅಲ್ಲಿಗೆ ಹೋದಂಥ ಸಮಿತಿ ತನ್ನ ಸ್ಪಷ್ಟ ವರದಿ ಎಂದು 4 ಲೈನಿನ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಆ ವರದಿಯ ಅಭಿಪ್ರಾಯ ಏನು?

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಅಧ್ಯಕ್ಷರೆ, ಮೈಸೂರಿನಲ್ಲಿರತಕ್ಕ ಅಂಧರ ಕೈಗಾರಿಕಾ ತರಬೇತಿ ಸಂಸ್ಥೆ ಅತ್ಯಂತ ಸೇವಾ ಮನೋಭಾವನೆಯಿಂದ ಕೆಲಸಮಾಡುವಂಥ ಉತ್ತಮ ಸಂಸ್ಥೆ ಆಗಿದೆ. ಎಲ್ಲವನ್ನೂ ಸರ್ಕಾರವೇ ಮಾಡಬೇಕೆಂಬ ಭಾವನೆ ಇದಕ್ಕೆ ತದ್ವಿರುದ್ಧವಾಗಿದೆ. ಏಕೆಂದರೆ ನಾವು ಸರ್ಕಾರಕ್ಕೆ ಇದನ್ನು ಒಂದು ವೇಳೆ ತೆಗೆದುಕೊಂಡರೆ, ಅಲ್ಲಿರತಕ್ಕ ಸಿಬ್ಬಂದಿವರ್ಗದವರು ತಮ್ಮ ಸಂಬಳಸಾರಿಗೆಗಳ ಬಗ್ಗೆಯೇ ಹೆಚ್ಚಿನ ಗಮನ ಕೊಟ್ಟು, ಬೇರೆಕಡೆ ಗಮನಕೊಡದೇ ಹೋಗಬಹುದೆಂಬ ಶಂಕೆ ಇದೆ. ಅದ್ದರಿಂದಲೇ ಅಲ್ಲಿಗೆ ಭೇಟಿ ನೀಡಿದ್ದು ಸಹಾಯಕ ನಿರ್ದೇಶಕರು ಏನು ವರದಿಯನ್ನು ಕೊಟ್ಟಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದು ಈ ರೀತಿ ಇದೆ.

ಈ ತರಬೇತಿ ಕೇಂದ್ರ ಕರ್ನಾಟಕ ರಾಜ್ಯದಲ್ಲಿ ಅಂಧರಿಗಾಗಿ ನಡೆಸುತ್ತಿರುವ ಏಕೈಕ ಕೈಗಾರಿಕಾ ತರಬೇತಿ ಕೇಂದ್ರವಾಗಿದ್ದು, ಈ ಕೇಂದ್ರಕ್ಕೆ ಶೇಕಡ 100ರಷ್ಟು ರಾಜ್ಯಸರ್ಕಾರ ಅನುದಾನವನ್ನು ನೀಡುತ್ತಿದೆ. ಈ ತರಬೇತಿ ಕೇಂದ್ರದ ಎಲ್ಲಾ ಚರಸ್ಥಿರ ಆಸ್ತಿಗಳೂ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ. ಈ ತರಬೇತಿ ಕೇಂದ್ರ ಅತ್ಯಂತ ಸುಸಜ್ಜಿತವಾದ ವ್ಯವಸ್ಥೆಯಿಂದ ಕೂಡಿರುವುದರಿಂದ ಅಂಧರಿಗೆ ಅಷ್ಟೇ ಅಲ್ಲದೇ, ಕಿವುಡ ಹಾಗೂ ದೈಹಿಕ ಅಂಗವಿಕಲರಿಗೂ ಕೂಡ ತರಬೇತಿಯನ್ನು ನೀಡಬಹುದು, ಮತ್ತು ಅದರಿಂದ ಒಂದು ಉತ್ಪಾದನಾ ಘಟಕವಾಗಿ ಪರಿವರ್ತನೆ ಮಾಡುವಂಥ ಉದ್ದೇಶ ಈ ಸರ್ಕಾರಕ್ಕಿದೆ ಏಕೆಂದರೆ ಅಲ್ಲಿ ಕೇವಲ ತರಬೇತಿಯನ್ನು ಕೊಡುವುದು ಅಷ್ಟೇ ಅಲ್ಲ. ಆ ತರಬೇತಿಯಿಂದ ಉತ್ಪಾದನೆ ಕೂಡ ಆಗುತ್ತದೆ. ಮತ್ತು ಎಸ್.ಎಸ್.ಎಲ್. ಸಿ. ಪಾಸ್ ಆದಂಥ ಮತ್ತು ಫೇಲ್ ಆದಂಥ ಅಂಗವಿಕಲರಿಗೆ ಒಂದು ಸಂಪೂರ್ಣ ಉಪಯೋಗವಾಗಬೇಕು, ಆ ಕೆಲಸವನ್ನು ಆ ಖಾಸಗಿ ಸಂಸ್ಥೆ ಮಾಡುವುದಕ್ಕೆ ಅರ್ಹವಾಗಿದೆ. ಹಾಲಿ ತರಬೇತಿದಾರರ ಆಯ್ಕೆ ಮಾಡಲು ಹಿಂದೆ ನಿಧಾನವಾಗಿದ್ದುದರಿಂದ ಅಲ್ಲಿನ ಸಿಬ್ಬಂದಿವರ್ಗದವರು ಅಲ್ಲಿ ಕೆಲಸ ಇಲ್ಲ, ತುರ್ತು ಕ್ರಮ ಕೈಗೊಳ್ಳಿ ಎಂದು ಸೂಚನೆಯನ್ನು ಕೊಟ್ಟಿದ್ದಾರೆ. ಈಗ ಅಲ್ಲಿ ಕೆಲಸ ಸೂಸೂತ್ರವಾಗಿ ನಡೆಯುತ್ತಿದೆ. ಈ ಅಂಧಮಕ್ಕಳ ತರಬೇತಿ ಕೇಂದ್ರದ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವುದರಿಂದ ಈ ಕೇಂದ್ರದ

ಬೆಳವಣಿಗೆಯನ್ನು ಕುಂಠಿತಗೊಳಿಸದೆ ರಾಜ್ಯ ಸರ್ಕಾರ ಕೇಂದ್ರವನ್ನು ಸಿಬ್ಬಂದಿವರ್ಗದ ಸಮೇತ ತನ್ನ ವಶಕ್ಕೆ ತೆಗೆದುಕೊಂಡು ಮೈಸೂರಿನಲ್ಲಿರುವ ಸರ್ಕಾರೀ ಅಂಧ ಮತ್ತು ಕಿವುಡ ಮಕ್ಕಳ ಶಾಲೆಗೆ ಸೇರಿಸಬೇಕೆಂಬ ಆಲೋಚನೆಯನ್ನು ಇಟ್ಟಿರುವುದು ನಿಜ. ಆದರೂ ಕೂಡ ಸರ್ಕಾರ ಇದನ್ನು ವಿತಕ್ಕೆ ಬೇಡವೆಂದು ಹೇಳುತ್ತಿದೆ ಎಂದರೆ, ನಾನು ಈಗಾಗಲೇ ಹೇಳಿದಂಥ ಕಾರಣಗಳಿಂದ. ಇದು ಉತ್ಪಾದನಾ ಘಟಕವಾಗಿ ಪರಿವರ್ತನೆಗೊಂಡು ಸೇವಾ ಮನೋಭಾವನೆಯಿಂದ ಕೆಲಸಮಾಡಬೇಕು ಎನ್ನತಕ್ಕ ವಿಕೈಕ ಉದ್ದೇಶದಿಂದ ಸರ್ಕಾರ ಈ ಕ್ರಮಕೈಗೊಂಡಿದೆಯೇ ಹೊರತು, ಬೇರೆ ಯಾವುದೇ ಸ್ವಾರ್ಥ ಅಥವಾ ಉದ್ದೇಶ ಇಲ್ಲವೆಂಬ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಆಯನೂರು ಮಂಜುನಾಥ್ : ತಾವು ಅರ್ಧ ಸತ್ಯವನ್ನು ದಯವಿಟ್ಟು ಸದನದ ಮುಂದಿಡಬೇಡಿ. ಈಗ ತಾವು ಏನು ವರದಿಯನ್ನು ಓದಿರಿ ಆದರ ಕೊನೆಯ ಪ್ಯಾರಾವನ್ನು ಓದಿ ಸದನದ ಗಮನಕ್ಕೆ ತನ್ನಿ.

ಶ್ರೀಮತಿ ಬಿ.ಬಿ. ಲಲಿತಾನಾಯಕ್ : ಅದನ್ನೂ ಓದುತ್ತೇನೆ. ಈ ಕೇಂದ್ರದ ತಪಾಸಣೆಯನ್ನು ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ತಮ್ಮ ಪತ್ರದ ಸಂಖ್ಯೆ... 7.9.94ರ ಮುಖಾಂತರ ಆದೇಶಿಸಿದಂತೆ ತಪಾಸಣೆಯನ್ನು ಸಹಾಯಕ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಛೇರಿ ಮೈಸೂರು ಇವರು ನಡೆಸಿ ತಪಾಸಣೆ ವರದಿಯನ್ನು ಸಲ್ಲಿಸಿದ್ದಾರೆ. ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೈಸೂರು ಅವರು ಜಿಲ್ಲಾಧಿಕಾರಿಗಳ ಪತ್ರದ ಪ್ರತಿಯನ್ನು ತಪಾಸಣಾ ವರದಿಯೊಂದಿಗೆ ಲಗತ್ತಿಸಿ ಸಲ್ಲಸಿರುವುದಿಲ್ಲ. ಸದರಿ ತಪಾಸಣಾ ವರದಿಯನ್ನು ಸರ್ಕಾರಕ್ಕೆ ನಿರ್ದೇಶಕರು ಕಳುಹಿಸಿ, ಆಗಿನ ಪರಿಸ್ಥಿತಿಯಲ್ಲಿ ಐ.ಟಿ.ಐ. ನಡೆಸಲು ಹಿಂಜರಿದುದರಿಂದ ಈ ಬಗ್ಗೆ ಸೂಕ್ತ ಸರ್ಕಾರೀ ಆದೇಶವನ್ನು ಕೋರಿದ್ದರು. ಅನಂತರ ಏನ್.ಎ.ಬಿ. ಯಮೇಲೆ ತಿಳಿಸಿರುವಂತೆ ಕೆಲವು ಷರತ್ತುಗಳನ್ನು ಹಾಕಿ ಸದರಿ ಕೇಂದ್ರವನ್ನು ನಡೆಸಲು ಒಪ್ಪಿಕೊಂಡಿದ್ದರಿಂದ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ನಿರ್ಧರಿಸಿ, ಈ ಕೇಂದ್ರವನ್ನು ಎನ್.ಎ.ಟಿ. ಆಡಳಿತದಲ್ಲಿ ಮುಂದುವರೆಸಿದೆ. ಎನ್.ಎ.ಟಿ.ಯವರು ಸದರಿ ತರಬೇತಿ ಕೇಂದ್ರವನ್ನು ನಡೆಸಲು...

ಶ್ರೀ ಆಯನೂರು ಮಂಜುನಾಥ್ : ಇಲ್ಲಿ ರಾಂಗ್ ಪ್ರೆಸೆಂಟೇಷನ್ ಆಗುತ್ತಿದೆ. ವರದಿಯ ಕೊನೆಯ ಅಂಶ ಏನು ಹೇಳುತ್ತದೆಂಬುದನ್ನು ನಾನು ಓದಿದರೆ ಮಾನ್ಯ ಮಂತ್ರಿಗಳಿಗೆ ಬಹುಶಃ ಆ ಮಾಹಿತಿ ತಲುಪುತ್ತದೆ. ಮಾನ್ಯ ಮಂತ್ರಿಗಳು ದಯವಿಟ್ಟು ಗಮನಿಸಬೇಕು. ಇಡೀ ಸಂಸ್ಥೆಯು ಸರ್ಕಾರೀ ಸ್ವಾಮ್ಯಕ್ಕೆ ಒಳಪಟ್ಟಿರುವುದರಿಂದ ಈ ಸಂಸ್ಥೆಯನ್ನು ಕುಂಠಿತ ಗೊಳಿಸದೆ ಬೆಳೆಸಿಕೊಂಡು ಹೋಗುವುದು ಅವಶ್ಯಕವಾಗಿದೆ. ಮೇಲ್ಕಂಡ ಕಾರಣಗಳಿಂದಾಗಿ ರಾಜ್ಯ ಸರ್ಕಾರ ಈ ಸಂಸ್ಥೆಯನ್ನು ಸಿಬ್ಬಂದಿಯೊಂದಿಗೆ ತನ್ನ ವಶಕ್ಕೆ ತೆಗೆದುಕೊಂಡು, ಮೈಸೂರಿನಲ್ಲಿರುವ ಸರ್ಕಾರೀ ಸಂಸ್ಥೆಗಳಾದ, ಸರ್ಕಾರೀ ಅಂಧ ಮಕ್ಕಳ ಪಾಠಶಾಲೆ, ಅಥವಾ ಸರ್ಕಾರೀ ಕಿವುಡ ಮಕ್ಕಳ ಪಾಠಶಾಲೆ ಸರ್ಕಾರೀ ಬ್ರೈಲ್ ಮುದ್ರಣಾಲಯ ಇವುಗಳಲ್ಲಿ ಯಾವುದಾದರೊಂದು ಸಂಸ್ಥೆಯೊಂದಿಗೆ ವಿಲೀನಗೊಳಿಸಿದಲ್ಲಿ ಅಂಧರ ಜೊತೆಯಲ್ಲಿ, ಇತರ ಅಂಗವಿಕಲರಿಗೂ ಈ ತರಬೇತಿ ಸಂಸ್ಥೆಯು ದಾರಿದೀಪವಾಗುವುದರಲ್ಲಿ ಸಂಶಯವಿಲ್ಲ. ಶೇಕಡ

ನೂರರಷ್ಟು ಅನುದಾನವನ್ನು ಸರ್ಕಾರವೇ ಭರಿಸುತ್ತಿರುವುದರಿಂದ ಯಾವುದೇ ಕಷ್ಟನಷ್ಟ ಆಗುವುದಿಲ್ಲ. ಒಂದು ವೇಳೆ ಪುನಃ ಸಂಸ್ಥೆಯು ಆಡಳಿತವನ್ನು ಖಾಸಗಿ ಸಂಸ್ಥೆಯವರಿಗೆ ನೀಡಿದಲ್ಲಿ, ಎನ್.ಎ.ಬಿ. ಸಂಸ್ಥೆಯ ಸಮಸ್ಯೆಗಳು ಪುನರಾವರ್ತನೆ ಆಗುವ ಸಂದರ್ಭಗಳೇ ಹೆಚ್ಚೆಂದು ಅಭಿಪ್ರಾಯಪಡಲಾಗಿದೆ.

ಶೇಕಡ 100 ರಷ್ಟು ಅನುದಾನ ಸರ್ಕಾರವೇ ಭರಿಸಿದರೆ ನಿರ್ವಹಣೆಗೆ ಯಾವುದೇ ಕಷ್ಟನಷ್ಟ ಆಗುವುದಿಲ್ಲ. ಒಂದು ವೇಳೆ, ಈ ಲೈನನ್ನು ತಮ್ಮ ಗಮನಕ್ಕೆ ತರುವುದು, ಪುನಃ ಸಂಸ್ಥೆಯು ಆಡಳಿತವನ್ನು ಖಾಸಗಿ ಸಂಸ್ಥೆಯವರಿಗೆ ನೀಡಿದಲ್ಲಿ ಎನ್.ಎ.ಬಿ. ಸಂಸ್ಥೆಯ ಹಾಗೂ ಪುನಃ ಸಮಸ್ಯೆಗಳು ಪುನರಾವರ್ತನೆ ಆಗುವ ಸಂದರ್ಭಗಳು ಹೆಚ್ಚೆಂದು ಅಭಿಪ್ರಾಯ ಪಡಲಾಗಿದೆ. ಅಂದರೆ ಖಾಸಗಿಯವರಿಗೆ ವಹಿಸಿದರೆ ತೊಂದರೆಯಾಗುತ್ತದೆ ಎಂದು ಹೇಳಿದ್ದಾರೆ. ಖಾಸಗಿಯವರು ಕೂಡ ತಮಗೆ ಎರಡೆರಡು ಬಾರಿ ತಾವು ಬೇರೆ ಆಲ್ಟರ್ನೇಟಿವ್ ಮಾಡಿಕೊಳ್ಳಿ ಬೇರೆ ಆಲ್ಟರ್ನೇಟಿವ್ ಮಾಡಿಕೊಳ್ಳಿ ಎಂದು ಪತ್ರ ಬರೆಯುತ್ತಾರೆ. ಆದರೂ ನೀವು ಅವರೇ ಮಾಡಬೇಕೆಂದು ಒತ್ತಾಯ ಏತಕ್ಕೆ ಹಾಕುತ್ತಿದ್ದೀರಿ? ಇಲ್ಲಿ ಒಂದೇ ನನ್ನ ಸಲಹೆ. ಇದು ಅಂಧರ ಕೇಂದ್ರ. ಸಚಿವರು ಅಂಧರಾಗಿ ಉತ್ತರವನ್ನು ನೀಡಬಾರದು. ದಯವಿಟ್ಟು ತೆರೆದ ಕಣ್ಣಿನಿಂದ ಉತ್ತರ ನೀಡಬೇಕು.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಮಾನ್ಯ ಸಭಾಧ್ಯಕ್ಷರೆ, ಅವು ಆಮೇಲೆ ಒಪ್ಪಿಕೊಂಡಿದ್ದಾರೆ. ಮೊದಲು ಏತಕ್ಕೆ ಒಪ್ಪಲಿಲ್ಲ ಎಂದರೆ ನಾವು ಶೇಕಡ 100 ರಷ್ಟು ಅನುದಾನ ಕೊಡುತ್ತಾ ಇರಲಿಲ್ಲ. ನಮಗೆ ಕಡಿಮೆಯಾಗುತ್ತದೆ, ಯಾವುದೇ ರೀತಿ ಆಗುವುದಿಲ್ಲ ಎಂದು ಹೇಳಿದ್ದರು. ಅದಕ್ಕೆ ಈಗ ಕೊಡುತ್ತಿದ್ದೇವೆ. ಆದ್ದರಿಂದ ಅದು ಬಹಳ ಚೆನ್ನಾಗಿ ನಡೆದುಕೊಂಡು ಹೋಗ್ಥುತ್ತಾ ಇದೆ.

ಶ್ರೀ ಬಿ. ಮುನಿಯಪ್ಪ : ಒಂದು ಖಾಸಗಿ ಸಂಸ್ಥೆಯವರು ಒಳ್ಳೆಯ ರೀತಿಯಲ್ಲಿ ಈ ಅಂಧ ಮಕ್ಕಳಿಗೆ ತೃಪ್ತಿಕರವಾಗಿ ನೆಡಸುತ್ತಿದ್ದಾರೆ ಎಂದು ಮಂತ್ರಿಗಳು ಹೇಳಿರುವುದು ಸಂತೋಷ. ಆದೇ ಸಂದರ್ಭದಲ್ಲಿ ಒಂದು ಸಂಸ್ಥೆ, ಸಮಾಜದಲ್ಲಿ ಯಾವ ಸಂಸ್ಥೆ ಬೇಕಾದರೂ ನಡೆಸಬಹುದು, ಆದರೆ ಅಂಧಮಕ್ಕಳ ವಿಚಾರವಾಗಿ ಪ್ರಾಮಾಣಿಕವಾಗಿ ಆಸಕ್ತಿ ಇಲ್ಲದೇ ನಡೆಸಿದರೆ, ಅದರಿಂದ ಆ ಮಕ್ಕಳಿಗೆ ಒಳ್ಳೆಯದಾಗುವುದಿಲ್ಲ. ಆದ್ದರಿಂದ ಆ ಸಂಸ್ಥೆಯನ್ನು ಬಲವಂತವಾಗಿ ನೀವು ನಡೆಸಿ ಎಂದು ಕೇಳಿಕೊಳ್ಳುವ ಪರಿಸ್ಥಿತಿ ಬಂದರೆ, ಅವರು ಪ್ರಾಮಾಣಿಕವಾಗಿ ಅಂಧಮಕ್ಕಳ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸಚಿವರು ಹೇಳಿದಹಾಗೆ ಆಮೇಲೆ ಒಪ್ಪಿಕೊಂಡರು ಅಂದರೆ ಬಲವಂತಕ್ಕೆ ಒಪ್ಪಿಕೊಳ್ಳುವುದು ಬೇರೆ, ಪ್ರಾಮಾಣಿಕವಾಗಿ ತೆರೆದ ಮನಸ್ಸಿನಿಂದ ಮಾಡುವಂಥದ್ದು ಬೇರೆ. ತೆರೆದ ಮನಸ್ಸಿನಿಂದ ಆ ಮಕ್ಕಳ ಬಗ್ಗೆ ಅನುಕಂಪದಿಂದ ಅವರು ಮಾಡುವುದಾದರೆ ಮುಂದುವರೆಸಲಿ, ಇಲ್ಲ ಅಂದರೆ ಸರ್ಕಾರ ತೆಗೆದುಕೊಳ್ಳಲಿ.

ಅಧ್ಯಕ್ಷರು : 100 ಗ್ರಾಂಟ್ ಕೊಡುತ್ತೇವೆ ಎಂದು ಹೇಳಿದಮೇಲೆ ಒಪ್ಪಿಕೊಂಡಿದ್ದಾರಂತೆ. ಆದ್ದರಿಂದ ಸಮಸ್ಯೆ ಬಗೆಹರಿದಿದೆ.

**ಬೊಮ್ಮಸಂದ್ರದಲ್ಲಿ ಕೈಗಾರಿಕಾಭಿವೃದ್ಧಿ ಮಂಡಲಿಯಿಂದ ಹಂಚಲಾದ ನಿವೇಶನಗಳ ಬಗ್ಗೆ.**

343 - ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?